## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2013–14ನೇ ಸಾಲಿನಲ್ಲಿ ಕೊಪಳ ಜಿಲ್ಲೆ ಗಂಗಾವತಿ ತಾಲ್ಲೂಕು ಪಂಚಾಯತ್ ಇಂಜಿನಿಯರಿಂಗ್ ಉಪವಿಭಾಗ, ಗಂಗಾವತಿಯಲ್ಲಿ ಅನುದಾನ ದುರುಪಯೋಗ ಆರೋಪ- ಶ್ರೀ ಸೂಗೂರು ಸುಭಾಷ್, ರಾಜ್ಯ ಗುಣ ನಿಯಂತ್ರಣಾಧಿಕಾರಿಯವರು ಸಲ್ಲಿಸಿದ್ದ ತನಿಖಾ ವರದಿಯಲ್ಲಿನ ಕೆಲವೊಂದು ಅಸ್ಪಷ್ಟ ಅಂಶಗಳಿಗೆ ಮತ್ತೊಮ್ಮೆ ತನಿಖೆ ನಡೆಸಲು ನೇಮಕಗೊಳಿಸಿರುವ ರಾಜ್ಯ ಗುಣ ನಿಯಂತ್ರಣಾಧಿಕಾರಿಯವರಿಗೆ ಸಹಕರಿಸಲು ಇಬ್ಬರು ಜಿಲ್ಲಾ ಗುಣನಿಯಂತ್ರಣಾಧಿಕಾರಿಗಳನ್ನು ನಿಯೋಜಿಸುವ ಬಗ್ಗೆ.

ಓದಲಾಗಿದೆ:

1. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 80 ಇಎನ್‌ಕ್ಯೂ ಜಿಪಅ 2015 ದಿನಾಂಕ:14.8.2015.

2. ಶ್ರೀ ಬಸವರಾಜ್ ಮಳಿಮಠ, ರಾಜ್ಯ ಗುಣ ನಿಯಂತ್ರಣ ಅಧಿಕಾರಿಯವರ ಮನವಿ ದಿನಾಂಕ:28.8.2015

<u>ಪ್ರಸ್ತಾವನೆ:-</u>

ಮೇಲೆ ಓದಲಾದ ಕ್ರಮಾಂಕ (1)ರ ಆದೇಶದಲ್ಲಿ 2013–14 ನೇ ಸಾಲಿನಲ್ಲಿ ಕೊಪ್ಪಳ ಜಿಲ್ಲೆ ಗಂಗಾವತಿ ತಾಲ್ಲೂಕು ಪಂಚಾಯತ್ ಇಂಜಿನಿಯರಿಂಗ್ ಉಪವಿಭಾಗದ ಅಧಿಕಾರಿಗಳು ಗುತ್ತಿಗೆದಾರರೊಂದಿಗೆ ಶಾಮೀಲಾಗಿ ಸರ್ಕಾರದಿಂದ ಬಿಡುಗಡೆಯಾದ ಅನುದಾನವನ್ನು ದುರುಪಯೋಗಪಡಿಸಿಕೊಂಡಿರುತ್ತಾರೆಂಬ ಆರೋಪಗಳಿಗೆ ಸಂಬಂಧಿಸಿದಂತೆ ಶ್ರೀ ಸೂಗೂರು ಸುಭಾಷ್, ರಾಜ್ಯ ಗುಣ ನಿಯಂತ್ರಣಾಧಿಕಾರಿ, ಇವರು ತನಿಖೆ ನಡೆಸಿ, ಸಲ್ಲಿಸಿದ್ದ ವರದಿಯಲ್ಲಿನ ಅಸ್ಪಷ್ಟ ಅಂಶಗಳಿಗೆ ಸಂಬಂಧಿಸಿದಂತೆ ಮತ್ತೊಮ್ಮೆ ತನಿಖೆ ನಡೆಸಿ ದಿನಾಂಕ:10.9.2015 ರೊಳಗೆ ವರದಿ ಸಲ್ಲಿಸಲು ಶ್ರೀಬಸವರಾಜ ಮಳಿಮಠ, ರಾಜ್ಯ ಗುಣ ನಿಯಂತ್ರಣಾಧಿಕಾರಿಯವರನ್ನು ನೇಮಕ ಮಾಡಲಾಗಿತ್ತು,

ಮೇಲೆ ಓದಲಾದ ಕ್ರಮಾಂಕ (2) ರಲ್ಲಿ ಶ್ರೀ ಬಸವರಾಜ್ ಮಳಿಮಠ, ಇವರು ಸರ್ಕಾರಕ್ಕೆ ಮನವಿ ಸಲ್ಲಿಸಿ, ನಿಗಧಿಪಡಿಸಿರುವ ಕಾಲಮಿತಿಯೊಳಗೆ ತನಿಖೆ ಪೂರ್ಣಗೊಳಿಸಿ, ವರದಿ ಸಲ್ಲಿಸಲು ಕಷ್ಟಸಾಧ್ಯವಾಗಿರುವುದರಿಂದ ಕಾಲಮಿತಿಯನ್ನು ದಿನಾಂಕ:30.9.2015ರವರಗೆ ವಿಸ್ತರಿಸುವಂತೆ ಹಾಗೂ ಇಬ್ಬರು ಜಿಲ್ಲಾ ಗುಣ ನಿಯಂತ್ರಣಾಧಿಕಾರಿಯವರನ್ನು ತನಿಖೆಗೆ ಸಹಕರಿಸಲು ನಿಯೋಜಿಸುವಂತೆ ಕೋರಿರುತ್ತಾರೆ.

ಸರ್ಕಾರವು ಶ್ರೀ ಬಸವರಾಜ್ ಮಳಿಮಠ ಇವರ ಮನವಿಯನ್ನು ಪರಿಶೀಲಿಸಿರುತ್ತದೆ. ಮೇಲೆ ಓದಲಾದ ಕ್ರಮಾಂಕ (1)ರ ಆದೇಶದಲ್ಲಿ ತಿಳಿಸಿರುವ ಅಸ್ಪಷ್ಟ ಅಂಶಗಳಿಗೆ ಸಂಬಂದಿಸಿದಂತೆ ಶ್ರೀ ಬಸವರಾಜ್ ಮಳಿಮಠ ಇವರು ನಡೆಸುವ ತನಿಖೆಗೆ ಸಹಕರಿಸಲು ಇಬ್ಬರು ಜಿಲ್ಲಾ ಗುಣ ನಿಯಂತ್ರಣಾಧಿಕಾರಿಗಳಾದ ಶ್ರೀ ಪ್ರಕಾಶ್ ಯಲ್ಲೇರಿ ಮತ್ತು ಶ್ರೀ ಮಂಜುನಾಥ್ ಕೇಶಪ್ಪ ಜಂತಲಿ ಇವರನ್ನು ನಿಯೋಜಿಸಲು ಸರ್ಕಾರವು ನಿರ್ಧರಿಸಿದೆ.ಆದ್ದರಿಂದ ಈ ಆದೇಶ;-

**ಆದೇಶ ಸಂಖ್ಯೆ:ಗ್ರಾಅಪ 80 ಇಎನ್‌ಕ್ಯೂ 15, ಬೆಂಗಳೂರು, ದಿನಾಂಕ:18.9.2015**

ಪ್ರಸ್ತಾವನೆಯಲ್ಲಿ ತಿಳಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಮೇಲೆ ಓದಲಾದ ಕ್ರಮಾಂಕ (1)ರ ಆದೇಶದಲ್ಲಿ ತಿಳಿಸಿರುವ ಅಸ್ಪಷ್ಟ ಅಂಶಗಳಿಗೆ ಸಂಬಂದಿಸಿದಂತೆ ಶ್ರೀ ಬಸವರಾಜ್ ಮಳಿಮಠ ಇವರು

---2

ನಡೆಸುವ ತನಿಖೆಗೆ ಸಹಕರಿಸಲು ಈ ಕೆಳಕಂಡ ಇಬ್ಬರು ಜಿಲ್ಲಾ ಗುಣ ನಿಯಂತ್ರಣಾಧಿಕಾರಿಗಳನ್ನು ಸರ್ಕಾರವು ನಿಯೋಜಿಸಿ ಆದೇಶಿಸಿದೆ.

1. ಶ್ರೀ ಪ್ರಕಾಶ್ ಯಲ್ಲೇರಿ, #1-5/17/1, ಗೋಮತಿ ಅಪಾರ್ಟ್ ಮೆಂಟ್, ಖೂಬಾ ಪ್ಲಾಟ್, ಗಾರ್ಡನ್ ರೋಡ್, ಗುಲಬರ್ಗಾ.
2. ಶ್ರೀ ಮಂಜುನಾಥ್ ಕೇಶಪ್ಪ ಜಂತಲಿ, ಶ್ರೀ ನಿಧಿ ನಿಲಯ, ದೇವತಾರಾ ಅಪಾಟ್‌ಮೆಂಟ್ ಹತ್ತಿರ, ಸರಸ್ವತಿ ಪುರಂ, ಕಲಘಟಗಿ ರಸ್ತೆ, ಧಾರವಾಡ.

ಮೇಲಿನ ಇಬ್ಬರು ಜಿಲ್ಲಾ ಗುಣ ನಿಯಂತ್ರಣಾಧಿಕಾರಿಯವರ ಸಹಾಯ/ಸಹಕಾರದೊಂದಿಗೆ ತನಿಖೆಯನ್ನು ಕೈಗೊಂಡು ದಿನಾಂಕ:30.9.2015ರೊಳಗೆ ವರದಿ ಸಲ್ಲಿಸುವಂತೆ ಶ್ರೀ ಬಸವರಾಜ್ ಮಳಿಮಠ, ರಾಜ್ಯ ಗುಣ ನಿಯಂತ್ರಣ ಅಧಿಕಾರಿಯವರಿಗೆ ಸೂಚಿಸಿದೆ. ರಾಜ್ಯ/ಜಿಲ್ಲಾ ಗುಣ ನಿಯಂತ್ರಣಾಧಿಕಾರಿಗಳು ಕೆ.ಆರ್.ಆರ್.ಡಿ.ಎ. ದರಗಳಂತೆ ನಿಯಮಾನುಸಾರ ಭತ್ಯೆಯನ್ನು ಪಡೆಯಲು ಅರ್ಹರಾಗಿರುತ್ತಾರೆ.

**ಕರ್ನಾಟಕ ರಾಜ್ಯ ಪಾಲರ ಆದೇಶಾನುಸಾರ**
**ಮತ್ತು ಅವರ ಹೆಸರಿನಲ್ಲಿ**

(ಸಿದ್ದೇಶ ಪೋತಲಕಟ್ಟಿ)
**ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು-ಎ)**
**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.**

ಇವರಿಗೆ:

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಯವರು, ವಿಧಾನ ಸೌಧ.
2. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು.
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಕೊಪ್ಪಳ.
4. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು, ಕೆ.ಆರ್.ವೃತ್ತ, ಬೆಂಗಳೂರು.
5. ಮುಖ್ಯ ಕಾರ್ಯಚರಣೆ ಅಧಿಕಾರಿ, ಕರ್ನಾಟಕ ಗ್ರಾಮಿಣಾ ರಸ್ತೆ ಅಭಿವೃದ್ಧಿ ಸಂಸ್ಥೆ, ಬೆಂಗಳೂರು.
6. ಸರ್ಕಾರದ ಅಧೀನ ಕಾರ್ಯದರ್ಶಿ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲ ಸಾರಿಗೆ ಇಲಾಖೆ, (ಸೇವೆಗಳು-ಎ ಮತ್ತು ಸಿ).
7. ನಿರ್ದೇಶಕರು, ಗ್ರಾಮೀಣಾ ಸುವರ್ಣ ಗ್ರಾಮ ಯೋಜನೆ, ಗ್ರಾ.ಅ.ಪಂ.ರಾಜ್ ಇಲಾಖೆ,
8. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾ.ಅ.ಪಂ.ರಾಜ್ ಇಲಾಖೆ,
9. ಅಧೀಕ್ಷಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವೃತ್ತ, ಬಳ್ಳಾರಿ.
10. ಶ್ರೀ ಬಸವರಾಜು ಮಳಿಮಠ, ನಂ 2035/242, 2ನೇ ಅಡ್ಡರಸ್ತೆ, ಅಂಜನೇಯ ಬಡಾವಣೆ, ದಾವಣಗೆರೆ-577004.
11. ಶ್ರೀ ಪ್ರಕಾಶ್ ಯಲ್ಲೇರಿ, #1-5/17/1, ಗೋಮತಿ ಅಪಾರ್ಟ್ ಮೆಂಟ್, ಖೂಬಾ ಪ್ಲಾಟ್, ಗಾರ್ಡನ್ ರೋಡ್, ಗುಲಬರ್ಗಾ.
12. ಶ್ರೀ ಮಂಜುನಾಥ್ ಕೇಶಪ್ಪ ಜಂತಲಿ, ಶ್ರೀ ನಿಧಿ ನಿಲಯ, ದೇವತಾರಾ ಅಪಾಟ್‌ಮೆಂಟ್ ಹತ್ತಿರ, ಸರಸ್ವತಿ ಪುರಂ, ಕಲಘಟಗಿ ರಸ್ತೆ, ಧಾರವಾಡ.
13. ಶ್ರೀ ಟಿ.ಚಕ್ರವರ್ತಿನಾಯಕ್, ಪರಿಶಿಷ್ಟ ಪಂಗಡ ವಿಭಾಗ ರಾಜ್ಯ ಉಪಾಧ್ಯಕ್ಷರು, ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ, ಕಾಂಗ್ರೆಸ್ ಭವನ, ಕ್ವೀನ್ಸ್ ರಸ್ತೆ, ಬೆಂಗಳೂರು.
14. ಗ್ರಾ.ಅ.ಪಂ.ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿ/ ಪ್ರಧಾನ ಕಾರ್ಯದರ್ಶಿ(ಪಂ.ರಾಜ್) /ಅಪರ ಕಾರ್ಯದರ್ಶಿ/ ಇವರ ಆಪ್ತ ಕಾರ್ಯದರ್ಶಿ/ಆಪ್ತ ಸಹಾಯಕರು
15. ಸರ್ಕಾರದ ಅಧೀನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,
16. ಶಾಖಾ ರಕ್ಷಾ ಕಡತ/ಕಂಪ್ಯೂಟರ್ ಸೆಲ್/ ಹೆಚ್ಚುವರಿ ಪ್ರತಿ.